5	ಬ್ಯಾಡಗಿ	158.22	61.22
6	ಶಿಗ್ಗಾಂವಿ	182.50	42.40
7	ಸವಣೂರು	155.15	47.18
	ಒಟ್ಟು	**1415.25**	**360.05**

ಪ್ರಸಕ್ತ ಸಾಲಿನಲ್ಲಿ ತಗ್ಗು ಗುಂಡಿಗಳನ್ನು ತುಂಬಲು ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸಲಾಗುತ್ತಿದ್ದು, ಮುಂದಿನ ಕ್ರಮಕೈಗೊಳ್ಳಲಾಗುತ್ತದೆ.

ವಿದ್ಯುತ್ ಅವಗಢದಲ್ಲಿ ನೊಂದವರಿಗೆ ಪರಿಹಾರ

1863 (2857); ಶ್ರೀ ಬಣಕಾರ್ ಯು. ಬಿ. (ಹಿರೇಕೆರೂರು)

ಅ) ಹಿರೇಕೆರೂರ ತಾಲ್ಲೂಕು ಚಿಕ್ಕೋಣಲೆಯಲ್ಲಿ 11 ಕೆ.ವಿ. ತಂತಿ ಹರಿದು ಬಿದ್ದಿದ್ದು ಯಾವಾಗ;

ಆ) ಅಂದು ಹಾನಿಗೊಳಗಾದವರ ಹಾನಿಗೊಳಗಾದ ಮೊತ್ತದ ವಿವರ ನೀಡುವುದು;

ಇ) ಇದುವರೆಗೆ ಏನಾದರೂ ಪರಿಹಾರ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ ಯಾವಾಗ ಪರಿಹಾರ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು;

ಈ) ಪರಿಹಾರ ವಿತರಣೆ ವಿಳಂಬವಾಗುವುದನ್ನು ತಪ್ಪಿಸಲು ಕಾಲಮಿತಿ ಹಾಕಿಕೊಳ್ಳಲಾಗುವುದೇ;

ಶ್ರೀ ಡಿ. ಕೆ. ಶಿವಕುಮಾರ (ಇಂಧನ ಸಚಿವರು)

ಅ) ಮತ್ತು (ಆ) ಹಿರೇಕೆರೂರು ತಾಲ್ಲೂಕು ಜಿಕ್ಕೋಣತಿ ಗ್ರಾಮದಲ್ಲಿ ದಿನಾಂಕ: 13.02.2014 ರಂದು ಮುಂಜಾನೆ 4.40 ಗಂಟೆಗೆ 11 ಕೆ. ವಿ. ವಿದ್ಯುತ್ ಮಾರ್ಗ ತುಂಡಾಗಿ ಬಿದ್ದಿದ್ದು ವಿದ್ಯುತ್ ಅಪಘಾತ ಸಂಭವಿಸಿರುತ್ತದೆ. ಈ ವಿದ್ಯುತ್ ಅಪಘಾತದಲ್ಲಿ ಹಾನಿಗೊಳಗಾದವರ ಮತ್ತು ಪರಿಹಾರದ ಮೊತ್ತದ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಶ್ರೀ ಸತ್ತರಸಾಬ ಗೌಸುಸಾಬ ಸಾತೆನಹಳ್ಳಿ ಇವರಿಗೆ ಮಧ್ಯಂತರ ಪರಿಹಾರವಾಗಿ `50,000/– (ರೂ. ಮತ್ತು ಸಾವಿರ ಮಾತ್ರ) ಗಳನ್ನು ನೀಡಲಾಗಿದೆ.

ಈ) ಹಾನಿಗೊಳಗಾದವರು ಅಗತ್ಯ ದಾಖಲಾತಿಗಳನ್ನು ನೀಡದೇ ಇರುವುದರಿಂದ, ದಾಖಲಾತಿಗಳನ್ನು ಪಡೆದುಕೊಂಡು ಶೀಘ್ರ ಪರಿಹಾರ ವಿತರಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಣಕಾರ್ ಯು. ಬಿ. (ಹಿರೇಕೆರೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2587ಕ್ಕೆ ಅನುಬಂಧ

ಹಿರೇಕೆರೂರು ತಾಲ್ಲೂಕು ಚಿಕ್ಕೋಣತಿ ಗ್ರಾಮದಲ್ಲಿ ಸಂಭವಿಸಿದ ವಿದ್ಯುತ್ ಅಪಘಾತದಲ್ಲಿ ಹಾನಿಗೊಳಗಾದವರ ಮತ್ತು ಪರಿಹಾರದ ಮೊತ್ತದ ವಿವರಗಳು

ಕ್ರ ಸಂ.	ಹೆಸರು	ಹಾನಿಯ ವಿವರಗಳು	ಹಾನಿಯ ಅಂದಾಜು (ರೂ. ಗಳಲ್ಲಿ)	ಪರಿಹಾರ
1	ಸತ್ತರಸಾಬ ಗೌಸುಸಾಬ ಸಾತೆನಹಳ್ಳಿ	ಕೆಂಪು ಹಂಚಿನ ಮನೆ ಸುಟ್ಟಿದೆ, ಮನೆಯಲ್ಲಿ ಇರಿಸಲಾದ ಹತ್ತಿ ಮತ್ತು ಮನೆಯ ಸರಕು ಸರಂಜಾಮುಗಳು ಸುಟ್ಟಿವೆ	5,00,000	50,000 ಮಧ್ಯಂತರ ಪರಿಹಾರ ನೀಡಿದೆ. ಪರಿಹಾರ ನೀಡಲು ನಷ್ಟ ಪ್ರಮಾಣದ ದೃಢೀಕೃತ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದು ಸಲ್ಲಿಸಲು ತಿಳಿಸಲಾಗಿದೆ.
2	ಶಫಿಸಾಬ ರಜಾಕಸಾಬ ಪಟೆಗಾರ	ಒಂದು ಟಿ. ವಿ. ಮತ್ತು ಮನೆಯಲ್ಲಿ ಇರಿಸಿದ್ದ ಹತ್ತಿ	50,000	ಪರಿಹಾರ ನೀಡಲು ನಷ್ಟ ಪ್ರಮಾಣದ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ

		ಸುಟ್ಟಿದೆ.		ಪಡೆದು ಸಲ್ಲಿಸಲು ತಿಳಿಸಲಾಗಿದೆ.
3	ಮಾಲತೇಶ ಬಾನಪ್ಪನವರ	ಇವರ 3 ವರ್ಷದ ಮಗನಾದ ಮಧು ಬಾನಪ್ಪನವರ ಎಂಬ ಬಾಲಕನಿಗೆ ಬಗಾಲ ತೊಡೆಯ ಮೂಳೆ ಮುರಿದಿದೆ.	50,000	ಪರಿಹಾರ ನೀಡಲು ಜಿಲ್ಲಾ ವೈದ್ಯಾಧಿಕಾರಿಯವರಿಂದ ಪಡೆದ ಪ್ರತಿಶತಃ ಅಂಗವೈಕಲ್ಯದ ಪ್ರಮಾಣ ಪತ್ರವನ್ನು ಸಲ್ಲಿಸಲು ತಿಳಿಸಲಾಗಿದೆ.
4	ಚಿನ್ನಪ್ಪ ಕರಿಯಪ್ಪ ಯಲಗೇರಿ	ಮುಖ ಮತ್ತು ಎಡಗೈಗೆ ವಿದ್ಯುತ್ ಜ್ವಾಲೆ ತಾಕಿದೆ	2,000	ಪರಿಹಾರ ನೀಡಲು ಜಿಲ್ಲಾ ವೈದ್ಯಾಧಿಕಾರಿಯವರಿಂದ ಪಡೆದ ಪ್ರತಿಶತಃ ಅಂಗವೈಕಲ್ಯದ ಪ್ರಮಾಣಪತ್ರವನ್ನು ಸಲ್ಲಿಸಲು ತಿಳಿಸಲಾಗಿದೆ.
5	ಚೆನ್ನಮ್ಮ ಫಕ್ಕಿರಪ್ಪ ಮಲ್ಲಾಡದ	ಬಲಗೈಗೆ ವಿದ್ಯುತ್ ಜ್ವಾಲೆ ತಾಕಿದೆ	2,000	
6	ಅಹ್ಮದಶರಿಫ ನಾಯಕವಾಡಿ	ಬಲಗೈಗೆ ವಿದ್ಯುತ್ ಜ್ವಾಲೆ ತಾಕಿದೆ	2,000	
7	ಶಿಯಾಜಹ್ಮದ ಸೊರಬ	ಬಲಗೈಗೆ ವಿದ್ಯುತ್ ಜ್ವಾಲೆ ತಾಕಿದೆ	2,000	
8	ಮಜಬೂರಸಾಬ ಹಿತ್ತಲಮನಿ	ಬಲಗೈಗೆ ವಿದ್ಯುತ್ ಜ್ವಾಲೆ	2,000	

		ತಾಕಿದೆ		
9	ಮದರಸಾಬ ಹಸ್ಸೇನಸಾಬ ಚಿಕ್ಕೆರೂರ	ಬಲಗೈ ಹೆಬ್ಬೆರಳಿಗೆ ವಿದ್ಯುತ್ ಜ್ವಾಲೆ ತಾಕಿದೆ	2,000	
10	ಗೋಣೆಪ್ಪ ದೊಡ್ಡಕಾರಗಿ	ಬಲಗೈ ಮೂರು ಬೆರಳುಗಳಿಗೆ ವಿದ್ಯುತ್ ಜ್ವಾಲೆ ತಾಕಿದೆ	2,000	
11	ಮಲ್ಲೇಶಪ್ಪ ರಾಮಪ್ಪ ಗೋಡೆರ	ಎಡಗೈ ಹೆಬ್ಬೆರಳಿಗೆ ವಿದ್ಯುತ್ ಜ್ವಾಲೆ ತಾಕಿದೆ	2,000	
12	ಮೆಹಬೂಬಿ ಖಾದರಸಾಬ ಸತ್ತೂರ	ಎಡಗೈಗೆ ವಿದ್ಯುತ್ ಜ್ವಾಲೆ ತಾಕಿದೆ	2,000	

ಜಲಾನಯನ ಇಲಾಖೆಯ ಕಾಮಗಾರಿಗಳು

1864 (3094); ಶ್ರೀ ಬಣಕಾರ್ ಯು. ಬಿ. (ಹಿರೇಕೆರೂರು)

ಅ) ಜಲಾನಯನ ಇಲಾಖೆಯಿಂದ ಹಾವೇರಿ ಜಿಲ್ಲೆಯಲ್ಲಿ ತಾಲ್ಲೂಕುವಾರು ಯಾವ ಯಾವ ಯೋಜನೆಗಳ ಅಡಿಯಲ್ಲಿ ಯಾವ ಯಾವ ಕಾಮ ಗಾರಿಗಳನ್ನು ತೆಗೆದುಕೊಳ್ಳಲಾಗಿದೆ, ಕಾಮಗಾರಿಗಳ ಪೂರ್ತಿ ವಿವರ ನಿಡುವುದು?

ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಹಾವೇರಿ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆವತಿಯಿಂದ 2013–14 ನೇ ಸಾಲಿನಿಂದ ಇಲ್ಲಿಯವರೆಗೆ ತಾಲ್ಲೂಕುವಾರು ಮತ್ತು ಯೋಜನಾವಾರು ತೆಗೆದುಕೊಂಡ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.